ಸೇತುವೆ & ನಿರೀಕ್ಷಣ ಮಂದಿರಗಳು

1021 (1384) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದಲ್ಲಿ 2009–10ನೇ ಸಾಲಿನಲ್ಲಿ ಕೈಗೊಂಡಿರುವ ಸೇತುವೆಗಳ ಸಂಖ್ಯೆ ಎಷ್ಟು (ಪೂರ್ಣ ಮಾಹಿತಿಯನ್ನು ಒದಗಿಸುವುದು);

ಆ) ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ನಿರೀಕ್ಷಣಾ ಮಂದಿರಗಳೆಷ್ಟು, ಮತ್ತು ನವೀಕರಿಸುವ ನಿರೀಕ್ಷಣಾ ಮಂದಿರಗಳ ಸಂಖ್ಯೆ ಎಷ್ಟು (ವಿವರವಾದ ಮಾಹಿತಿಯನ್ನು ಒದಗಿಸುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೆ.ಆರ್.ಡಿ.ಸಿ.ಎಲ್. ವತಿಯಿಂದ ಬಬಲೇಶ್ವರ–ಕಾಕನಂಡಗಿ ಕಾರಜೋಳ ಜಿಲ್ಲಾ ಮುಖ್ಯರಸ್ತೆಯ ಕಿಮೀ. 5.80 ರಲ್ಲಿ ರೂ.146.80 ಲಕ್ಷಗಳ ಮೊತ್ತಕ್ಕೆ ಸೇತುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಆ) 2009–10ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ನಿರೀಕ್ಷಣ ಮಂದಿರಗಳ ಕಾಮಗಾರಿಗಳು ಸೇರ್ಪಡೆಗೊಂಡಿರುವುದಿಲ್ಲ. ಅನುದಾನ ಲಭ್ಯತೆ ಮೇಲೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಹರಿಯಾಲಿ ಯೋಜನೆಗಳ ಅನುಷ್ಠಾನ

1022 (1385) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಲ್ಲಿಯವರೆಗೆ ಮಂಜೂರಾದ ಹರಿಯಾಲಿ ಯೋಜನೆಗಳೆಷ್ಟು?

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಪೂರ್ಣಗೊಂಡ ಯೋಜನೆಗಳ ಹಾಗೂ ಅಪೂರ್ಣವಾಗಿ ಉಳಿದಿರುವ ಯೋಜನೆಗಳ ಸಂಖ್ಯೆಯೆಷ್ಟು?

ಇ) ಯಾವ ಕಾರಣಕ್ಕಾಗಿ ಯೋಜನೆಗಳು ಪೂರ್ಣವಾಗಿ ಉಳಿದಿರುತ್ತದೆ?

ಈ) ಈ ಯೋಜನೆಗಳನ್ನು ಪೂರ್ಣಗೊಳಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಎ. ರವೀಂದನಾಥ್ (ಕೃಷಿ ಸಚಿವರು) :

ಅ) ಇಲ್ಲಿಯವರೆಗೆ ಒಟ್ಟು 2384 ಹರಿಯಾಲಿ ಯೋಜನೆಗಳು (ಕಿರುಜಲಾನಯನಗಳು) ಮಂಜೂರಾಗಿದ್ದು, ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಹರಿಯಾಲಿ ಯೋಜನೆಗಳು ಯಾವುದು ಪೂರ್ಣಗೊಂಡಿರುವುದಿಲ್ಲ.

ಇ) ಈ ಯೋಜನೆಗಳು ಸಾಮಾನ್ಯವಾಗಿ ಐದು ವರ್ಷಗಳ ಅವಧಿಯಲ್ಲಿ ಪೂರ್ಣಗೊಳ್ಳಲು ಮಂಜೂರಾಗಿರುವುದರಿಂದ ಮುಂದಿನ ವರ್ಷ ಬಹುತೇಕ ಜಲಾನಯನಗಳು ಪೂರ್ಣಗೊಳ್ಳುತ್ತವೆ. ಕೇಂದ್ರ ಸರ್ಕಾರದಿಂದ ಕಂತುಗಳು ಬಿಡುಗಡೆಯಾಗುವುದರಲ್ಲಿ ವಿಳಂಬ ಉಂಟಾಗುತ್ತದೆ.

ಈ) ಈ ಯೋಜನೆಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, 2012ರ ಡಿಸೆಂಬರ್ ಒಳಗೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರವು ತಿಳಿಸಿರುತ್ತದೆ.

ಅನುಬಂಧ

ರಾಜ್ಯದಲ್ಲಿ ಇಲ್ಲಿಯವರೆಗೆ ಮಂಜೂರಾದ ಹರಿಯಾಲಿ ಯೋಜನೆಗಳು

(ಜಿಲ್ಲಾವಾರು)

ಕ್ರ ಸಂ.	ಜಿಲ್ಲೆಯ ಹೆಸರು	ಕಿರು ಜಲಾನಯನಗಳ ಸಂಖ್ಯೆ
1	ಬೆಂಗಳೂರು	30
2	ರಾಮನಗರ	34
3	ಬೆಳಗಾವಿ	104
4	ಬೀದರ್	44
5	ಚಾಮರಾಜನಗರ	67
6	ಚಿಕ್ಕಮಗಳೂರು	88

7	ಚಿತ್ರದುರ್ಗ	110
8	ಧಾರವಾಡ	52
9	ದಾವಣಗೆರೆ	100
10	ಗುಲ್ಬರ್ಗಾ	138
11	ಗದಗ	52
12	ಹಾಸನ	104
13	ಹಾವೇರಿ	108
14	ಕೋಲಾರ	70
15	ಚಿಕ್ಕಬಳ್ಳಾಪುರ	86
16	ಮೈಸೂರು	79
17	ತುಮಕೂರು	146
18	ರಾಯಚೂರು	171
19	ಬಳ್ಳಾರಿ	162
20	ಬಿಜಾಪುರ	198
21	ಕೊಪ್ಪಳ	121
22	ಬಾಗಲಕೋಟೆ	180
23	ಉಡುಪಿ	5
24	ಉತ್ತರಕನ್ನಡ	55
25	ಶಿವಮೊಗ್ಗ	30
26	ಮಂಡ್ಯ	20
27	ಕೊಡಗು	10
28	ದಕ್ಷಿಣ ಕನ್ನಡ	20
	ಒಟ್ಟು	**2384**